ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸಹಾಯ ಧನ

3623(4364) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಾಲಿ ಇರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು;

ಆ) ಕಳೆದ ಮೂರು ಸಾಲಿನಲ್ಲಿ ಹೊಸದಾಗಿ ಪ್ರಾರಂಭಗೊಂಡ ಮತ್ತು ಮುಚ್ಚಿ ಹೋದ ಕಾರ್ಖಾನೆಗಳ ಸಂಖ್ಯೆ ಎಷ್ಟು;

ಇ) ರಾಜ್ಯ ಸರ್ಕಾರ ಸಣ್ಣ ಕೈಗಾರಿಕೆಗಳಿಗೆ ಬಿಡುಗಡೆ ಮಾಡಬೇಕಾದ ಸಹಾಯಧನದ ಬಾಕಿ ಮೊತ್ತ ಎಷ್ಟು; ಯಾವ ಸಾಲಿನಿಂದ ಬಾಕಿ ಇದೆ;

ಈ) ಈ ಸಾಲಿನಲ್ಲಿ ಇದುವರೆಗೆ ಬಿಡುಗಡೆಯಾದ ಮೊತ್ತ ಎಷ್ಟು?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು) :

ಅ) 2,99,407

ಆ) ಈ ಅವಧಿಯಲ್ಲಿ 45,507 ಸಣ್ಣ ಕೈಗಾರಿಕೆಗಳು ನೋಂದಾಯಿತವಾಗಿವೆ. ಮಾದರಿ ಸಮೀಕ್ಷಾ ವರದಿ ಪ್ರಕಾರ ರಾಜ್ಯದಲ್ಲಿ ಶೇಕಡಾ 28.95ರಷ್ಟು ಅಂತಹ ಘಟಕಗಳು ಮುಚ್ಚಿರುವುದಾಗಿ ತಿಳಿದು ಬಂದಿದೆ.

ಇ) ದಿನಾಂಕ : 1.1.99 ರಿಂದ 30.3.2003 ರವರೆಗಿನ ಅವಧಿಗೆ ರೂ. 405.67 ಕೋಟಿ ಬಾಕಿ ಇರುತ್ತದೆ.

ಈ) ಯಾವುದೇ ಮೊತ್ತ ಬಿಡುಗಡೆಯಾಗಿರುವುದಿಲ್ಲ.

ರಾಜ್ಯದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ

3624(4372) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರವು ಯೋಚಿಸಿರುವಂತೆ ರಾಜ್ಯದಲ್ಲಿನ ವಿಧಾನಸಭಾ ಕ್ಷೇತ್ರಗಳಲ್ಲಿ, ತಲಾ ಎರಡು ಅಂಬೇಡ್ಕರ್ ಭವನಗಳ ನಿರ್ಮಾಣದ ಸಂಬಂಧವಾಗಿ ಕಾರ್ಯಕ್ರಮವನ್ನು ರೂಪಿಸಿದೆಯೇ;

ಆ) ಕಾರ್ಯಕ್ರಮವನ್ನು ರೂಪಿಸಲಾಗಿದ್ದಲ್ಲಿ, ಅದರ ವಿವರಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಮತ್ತು ಆ) ಹೌದು.

ಸರ್ಕಾರವು ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 2 ಅಂಬೇಡ್ಕರ್ ಭವನಗಳನ್ನು ನಿರ್ಮಾಣ ಮಾಡಲು ತಲಾ ರೂ. 5.00 ಲಕ್ಷಗಳನ್ನು ಒದಗಿಸಲಾಗುತ್ತಿದ್ದು, ಇದರ ಜೊತೆಗೆ ಹೆಚ್ಚುವರಿ ವೆಚ್ಚವನ್ನು ಸ್ಥಳೀಯ ವಂತಿಕೆಯಿಂದ ಭರಿಸಬೇಕಾಗುತ್ತದೆ. ಈ ಕಾರ್ಯಕ್ರಮದ ಬಗ್ಗೆ ಮಾರ್ಗದರ್ಶಿಯನ್ನು ತಯಾರಿಸಲಾಗುತ್ತಿದೆ.

ರಾಜ್ಯದಲ್ಲಿ ಸಕ್ಕರೆ ಅಭಿವೃದ್ಧಿ ನಿಧಿ ಸ್ಥಾಪನೆ

3625(4373) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಕ್ಕರೆ ಅಭಿವೃದ್ಧಿ ನಿಧಿ ಸ್ಥಾಪಿಸಲಾಗುತ್ತಿದೆಯೇ;

ಆ) ಹಾಗಿದ್ದಲ್ಲಿ ಈ ಸಂಬಂಧವಾಗಿ ಸಂಪನ್ಮೂಲ ಕ್ರೋಢೀಕರಣದ ವಿವರಗಳೇನು;

ಇ) ಉದ್ದೇಶಿತ 'ಸಕ್ಕರೆ ಅಭಿವೃದ್ಧಿ ನಿಧಿ'ಯಲ್ಲಿ ರೈತರಿಗೆ ಪೂರಕವಾಗಿರುವ ಅಂಶಗಳು ಯಾವುವು;

ಈ) ಸಂಕಷ್ಟದಲ್ಲಿರುವ 'ಸಕ್ಕರೆ ಉದ್ಯಮದ' ಪರಿಸ್ಥಿತಿಗೆ ಈ ನಿಧಿ ನೆರವಾಗುತ್ತಿದೆಯೇ?

ಶ್ರೀ ಎಂ. ಮಹಾದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು) :

ಅ) ಕರ್ನಾಟಕ ಸಕ್ಕರೆ ಅಭಿವೃದ್ಧಿ ನಿಧಿ ಇನ್ನೂ ಸ್ಥಾಪನೆಯಾಗಿರುವುದಿಲ್ಲ. ಇಂತಹ ಒಂದು ನಿಧಿಯನ್ನು ಸ್ಥಾಪಿಸಲು ಯೋಜಿಸಲಾಗಿದೆ. ಈ ಸಂಬಂಧ ಕರಡು ರೂಪುರೇಷೆಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಸ್ಥಾಪಿಸಲು ಉದ್ದೇಶಿಸಿರುವ 'ಕರ್ನಾಟಕ ಸಕ್ಕರೆ ಅಭಿವೃದ್ಧಿ ನಿಧಿ'ಗೆ ಸರ್ಕಾರದ ವತಿಯಿಂದ ಮೂಲ ಧನ ರೂಪದಲ್ಲಿ ರೂ. 25.00 ಕೋಟಿ ಪಡೆದು, ಅದರಂತೆ ಮುಂದೆ ಈ ನಿಧಿಗೆ ಕಬ್ಬು ಬೆಳೆಗಾರರಿಂದ ಕಾರ್ಖಾನೆ ವತಿಯಿಂದ ಹಾಗೂ ಸರ್ಕಾರದ ವತಿಯಿಂದ ಪ್ರತಿ ಟನ್ ಕಬ್ಬು ನುರಿಸುವಿಕೆಗೆ ತಲಾ ರೂ. 5.00 ರಂತೆ ಸಂಗ್ರಹಿಸಲು ಯೋಜಿಸಲಾಗಿದೆ.

ಇ) ಸಕ್ಕರೆ ಕಾರ್ಖಾನೆಗಳ ಅಭಿವೃದ್ಧಿ ಯೋಜನೆಗಳಿಗಾಗಿ ಆರ್ಥಿಕ ನೆರವು ನೀಡುವ ಉದ್ದೇಶದಿಂದ ಮತ್ತು ಅವಶ್ಯವಿರುವ ಸಕ್ಕರೆ ಕಾರ್ಖಾನೆಗಳ ಭಾಗದ ರೈತರ ಕಬ್ಬಿನ ಬಿಲ್ಲನ್ನು ಪಾವತಿಸಲು ಅನುಕೂಲವಾಗುವಂತೆ ಈ ನಿಧಿಯಿಂದ ಆರ್ಥಿಕ ನೆರವು ನೀಡಲು ಉದ್ದೇಶಿಸಲಾಗಿದೆ.

ಈ) ಈ ಕೆಳಕಂಡ ಯೋಜನೆಗಳಿಂದ ಸಂಕಷ್ಟದಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ನೆರವಾಗಬಹುದೆಂದು ಭಾವಿಸಲಾಗಿದೆ.

1. ಯಂತ್ರೋಪಕರಣಗಳನ್ನು ಮೇಲ್ದರ್ಜೆಗೆ ಏರಿಸುವುದು.
2. ಮಳೆ ನೀರಿನ ಸಂಗ್ರಹಣೆ ಮತ್ತು ಸದ್ಬಳಕೆ
3. ಸಕ್ಕರೆ ಗುಣಮಟ್ಟ ಸುಧಾರಣೆ
4. ಸಕ್ಕರೆ ಕಾರ್ಖಾನೆಗಳಲ್ಲಿನ ಹೆಚ್ಚುವರಿ ಸಿಬ್ಬಂದಿಯನ್ನು ಕಡಿತಗೊಳಿಸಿ ಸ್ವಯಂ ನಿವೃತ್ತಿ ಯೋಜನೆ
5. ಉಪ ಉತ್ಪನ್ನಗಳ ಕಾರ್ಯ ಚಟುವಟಿಕೆಗಳು (ಸಹವಿದ್ಯುತ್ ಮತ್ತು ಎಥನಾಲ್ ಹೊರತುಪಡಿಸಿ)
6. ಪರಿಸರ ಸಂಬಂಧಿ ಯೋಜನೆಗಳು
7. ತಾಂತ್ರಿಕ ಆರ್ಥಿಕ ಅಧ್ಯಯನ

ಮೇಲ್ಕಂಡ ಉದ್ದೇಶಗಳನ್ನು ಹೊಂದಿರುವ ಉದ್ದೇಶಿತ ಸಕ್ಕರೆ ಅಭಿವೃದ್ಧಿ ನಿಧಿಯು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಂಕಷ್ಟದಲ್ಲಿರುವ ರೈತರಿಗೆ ಮತ್ತು ಸಕ್ಕರೆ ಉದ್ಯಮಕ್ಕೆ ನೆರವಾಗುವುದೆಂದು ಭಾವಿಸಿದೆ.

ಮಂಡ್ಯ ಜಿಲ್ಲೆಯಲ್ಲಿ ಮರಳು ತೆಗೆಯಲು ಪರವಾನಿಗೆ

3627(4375) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ "ಮರಳು ತೆಗೆಯಲು ಪರವಾನಿಗೆ" ನೀಡಲು ಅನುಸರಿಸುತ್ತಿರುವ ಮಾರ್ಗದರ್ಶಿ ನಿಯಮಾವಳಿಗಳೇನು;

ಆ) ಇದರ ಅನ್ವಯ ರಾಜ್ಯದಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಮರಳನ್ನು ತೆಗೆಯಲು ಅನುಮತಿ ನೀಡಲಾಗಿದೆ;